ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

KARNATAK UNIVERSITY

University with Potential for Excellence

Pavate Nagar, **Dharwad**- Karnataka-India 580 003

Publication Dept

ಪ್ರಸಾರಾಂಗ ವಿಭಾಗ

ಕವಿವಿ:ಪ್ರಸಾರಾಂಗ:2026–27/ **ದಿನಾಂಕ : 23–11–2026**

: ಸುತ್ತೋಲೆ :

ಕ.ವಿ.ವಿ. ನಿಯತಕಾಲಿಕೆಗಳಿಗೆ ಹಾಗೂ ಕೃತಿಗಳಿಗೆ ಲೇಖನಗಳ ಆಹ್ವಾನದ ಅವಧಿ ವಿಸ್ತರಣೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗ, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಅಧ್ಯಾಪಕರ/ವಿದ್ಯಾರ್ಥಿಗಳ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ನಿಯತಕಾಲಿಕೆಗಳಿಗೆ ಸಂಶೋಧನಾತ್ಮಕ ಲೇಖನಗಳನ್ನು ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಪ್ರಸಕ್ತ ಸಾಲಿಗೆ ಕವಿವಿ ಪ್ರಸಾರಾಂಗ 75 ವರ್ಷಗಳನ್ನು ಪೂರೈಸಿದ ಈ ಸಂದರ್ಭದಲ್ಲಿ ಅಮೃತ ಮಹೋತ್ಸವ ಸಂಭ್ರಮದಲ್ಲಿದ್ದು ಅದರ ಅಂಗವಾಗಿ ಕ.ವಿ.ವಿ.ಯ 5 ಸಂಶೋಧನಾ ನಿಯತಕಾಲಿಕೆಗಳನ್ನು ವಿಶಿಷ್ಟತೆಯೊಂದಿಗೆ ಹೊರತರಲು ನಿರ್ಧರಿಸಲಾಗಿದ್ದು, ಕಾರಣ ಮತ್ತೊಮ್ಮೆ ಲೇಖನಗಳನ್ನು ಮರು ಆಹ್ವಾನಿಸಲಾಗಿದೆ. ಆಸಕ್ತರು ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ.ಧಾರವಾಡ ಇವರಿಗೆ ಲೇಖನಗಳನ್ನು ಸಲ್ಲಿಸಲು ದಿನಾಂಕ 12–12–2026 ರವರೆಗೆ ಅವಧಿ ಮರು ವಿಸ್ತರಿಸಲಾಗಿದೆ.

1	ಕರ್ನಾಟಕ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ	ಸಂಶೋಧನಾತ್ಮಕ ಲೇಖನ/ಪುಸ್ತಕ ವಿಮರ್ಶೆ (ಅಧ್ಯಾಪಕರಿಗೆ ಹಾಗೂ ಸಂಶೋಧಕರಿಗೆ)
2	ವಿದ್ಯಾರ್ಥಿ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ	ಇಂಗ್ಲೀಷ್/ಹಿಂದಿ/ಮರಾಠಿ/ಸಂಸ್ಕೃತ/ಉರ್ದು/ಇತರೆ ಭಾಷೆಗಳ ಸಂಶೋಧನಾ ಲೇಖನ/ಕತೆ/ಕವಿತೆ (ವಿದ್ಯಾರ್ಥಿಗಳಿಗೆ ಮಾತ್ರ)
3	ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಸ್ – ವಾರ್ಷಿಕ ಸಂಚಿಕೆ	ಇಂಗ್ಲೀಷ್/ಹಿಂದಿ/ಮರಾಠಿ/ಸಂಸ್ಕೃತ/ಉರ್ದು/ಇತರೆ ಭಾಷೆಗಳ ಸಂಶೋಧನಾತ್ಮಕ ಲೇಖನ (ಅಧ್ಯಾಪಕರಿಗೆ ಹಾಗೂ ಸಂಶೋಧಕರಿಗೆ)
4	ಕೆ.ಯು.ಜರ್ನಲ್ ಆಫ್ ಸೋಶಿಯಲ್ ಸಾಯನ್ಸ್ – ವಾರ್ಷಿಕ ಸಂಚಿಕೆ	ಈ ವಿಷಯಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿರಬೇಕು. (ಅಧ್ಯಾಪಕರಿಗೆ ಹಾಗೂ ಸಂಶೋಧಕರಿಗೆ)
5	ಕೆ.ಯು.ಜರ್ನಲ್ ಆಫ್ ಸಾಯನ್ಸ್ – (ಇ–ಜರ್ನಲ್)	

ಪ್ರಸಕ್ತ 2026–27 ನೇ ಸಾಲಿಗೆ ಪ್ರಕಟವಾಗಲಿರುವ ಮೇಲಿನ ನಿಯತಕಾಲಿಕೆಗಳಲ್ಲಿ ಪ್ರಕಟಿಸಲು ಕಳಿಸುವ ಲೇಖನಗಳನ್ನು 3000 ಸಾವಿರ ಶಬ್ದಗಳ (Three Thousand Words) ಮಿತಿಯಲ್ಲಿ ಸಿದ್ದಪಡಿಸಿ, ಪ್ರಸಾರಾಂಗಕ್ಕೆ ತಲುಪುವಂತೆ ಕಳಿಸುವುದು.

- ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಜ್ ನಿಯತಕಾಲಿಕೆ ಲೇಖನ A/4 Size Double ಕಾಲಂನಲ್ಲಿ ಸಿದ್ಧಪಡಿಸಿ ಸಿ.ಡಿ. ಹಾಗೂ ಹಾರ್ಡ ಪ್ರತಿಯಲ್ಲಿ ಲೇಖನ ಕಳಿಸಬೇಕು..
- ಸೋಶಿಯಲ್ ಸಾಯನ್ಸ್ ಮತ್ತು ಸಾಯನ್ಸ್ ನಿಯತಕಾಲಿಕೆಗಳ ಲೇಖನಗಳನ್ನು Box Formet ನಲ್ಲಿ ಸಿದ್ಧಪಡಿಸಿ ಲೇಖಕರು ಲೇಖನಗಳ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಿಕೊಡುವುದು.
- ಕರ್ನಾಟಕ ಭಾರತಿ, ವಿದ್ಯಾರ್ಥಿ ಭಾರತಿ ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ತಮ್ಮ ಲೇಖನವನ್ನು ನುಡಿಲಿಪಿ (ಪೇಜ್‌ಮೇಕರ್–ಬುಕ್ ಫಾರ್ಮೆಟ್‌ಗೆ) ಸಿದ್ಧಪಡಿಸಿ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಬೇಕು.
- ಸದರಿ ನಿಯತಕಾಲಿಕೆಗಳು ISSN & Refereed Journal ಆಗಿರುವುದರಿಂದ ಲೇಖನಗಳನ್ನು ವಿಷಯಕ್ಕೆ ಸಂಬಂಧಿಸಿದ ಸಂಪಾದಕೀಯ ಮಂಡಳಿಯು ವಿಷಯ ಪರಿಣಿತರಿಂದ ಪರಿಶೀಲನೆ ಮಾಡಿದ ನಂತರ ಪ್ರಕಟಣೆಗೆ ಯೋಗ್ಯವಾದವುಗಳನ್ನು ಮಾತ್ರ ಪ್ರಕಟಿಸಲಾಗುವುದು. ತಿರಸ್ಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಆ ಬಗ್ಗೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

- ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ಲೇಖನದ ಜೊತೆ ಕೃತಿಚೌರ್ಯ ವರದಿಯನ್ನು (Plagiarism Report) ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಮತ್ತು ಸಂಚಿಕೆಯಯಲ್ಲಿ ಪ್ರಕಟಿತ ಲೇಖನಗಳಿಗೆ ಆಕ್ಷೇಪಣೆ ಅಥವಾ ದೂರು (ಕಾನೂನಾತ್ಮಕ ವಿಷಯ) ಬಂದಲ್ಲಿ ಲೇಖಕರೇ ಹೊಣೆಗಾರರಾಗಿರುತ್ತಾರೆ.
- ಕೆ.ಯು.ಜರ್ನಲ್ ಆಫ್ ಸಾಯನ್ಸ್ ನಿಯತಕಾಲಿಕೆಯನ್ನು ಇ–ಜರ್ನಲ್ ಆಗಿ ವೆಬ್‌ಸೈಟ್ ಮೂಲಕ ಪ್ರಕಟಿಸಲಾಗುತ್ತದೆ.
- ವಿದ್ಯಾರ್ಥಿ ಭಾರತಿ ನಿಯತಕಾಲಿಕೆಗೆ ಸ್ನಾತಕೋತ್ತರ ವಿಭಾಗಗಳ ಹಾಗೂ ಪದವಿ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಲೇಖನ ಕಳಿಸಬಹುದು.
- ಕರ್ನಾಟಕ ಭಾರತಿ ನಿಯತಕಾಲಿಕೆಗೆ ಶಿಕ್ಷಕರು/ಸಂಶೋಧಕರು ಮಾತ್ರ ಲೇಖನ ಕಳಿಸಬಹುದು.
- ಈಗಾಗಲೇ ಪ್ರಕಟಗೊಂಡಿರುವ ಸಂಶೋಧನಾ ಲೇಖನಗಳನ್ನು ಮರುಪ್ರಕಟಣೆಗೆ ಕಳಿಸುವಂತಿಲ್ಲ.

ಹೆಚ್ಚಿನ ಮಾಹಿತಿಗಾಗಿ ಪ್ರೊ. ಜೆ.ಎಂ.ಚಂದುನವರ ಪ್ರಭಾರಿ ನಿರ್ದೇಶಕರು, ಪ್ರಸಾರಾಂಗ ವಿಭಾಗ, ಕ.ವಿ.ವಿ.ಧಾರವಾಡ **ಮೊ.ನಂ. 9448560301** ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು
ಪ್ರಸಾರಾಂಗ

ಪ್ರತಿ : 1) ಮುಖ್ಯಸ್ಥರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2)ನಿರ್ದೇಶಕರು, ಐ.ಟಿ.ವಿಭಾಗ, ಕ.ವಿ.ವಿ.ಧಾರವಾಡ (ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು)